

# ಮಳೆ ವಿಶೇಷ

ಸಣ್ಣಗೆ, ಹೆಚ್ಚು ಹೊತ್ತು ಹನಿಯುತ್ತ ಬೇಸರ ಹುಟ್ಟಿಸುವ, ಗುಡುಗು ಸಿಡಿಲುಗಳೊಂದಿಗೆ ಆರ್ಭಟಿಸಿ ಬಿರುಸಾಗಿ ಸುರಿದು ಭಯ ತರುವ, ದಪ್ಪ ದಪ್ಪ ಹನಿಗಳಾಗಿ ಒಂದರೆ ನಿಮಿಷ ನೆಲಕ್ಕೆ ರಪ್ಪ ರಪ್ಪ ಬಡಿದು ಹೋಗುವ ಆತುರದ ಮಳೆಯಲ್ಲ. ಸಮಾಧಾನದಿಂದ, ಶಿಮುಮುಖದ ಬುದ್ಧ ಮಂದಸ್ಮಿತ ಹನಿಗಳಾದಂತೆ ಮಳೆ. ನೋಡುತ್ತ ನಿಂತ ಕತೆಗಾರನಿಗೆ ಆ ಮಳೆಯಲ್ಲಿ ನೆನೆಯಬೇಕೆನಿಸಿತು. ಚಿಕ್ಕಂದಿನಂತೆ ಮಳೆನೀರಿನಲ್ಲಿ ಆಡಬೇಕೆನಿಸಿತು. ಈ ವಯಸ್ಸಿನಲ್ಲಿ ಮಳೆಯಲ್ಲಿ ಆಡುವುದು ಆಗದಾದರೂ ನೆನೆಯಲು ಸಂಕೋಚದ ಅಡ್ಡಿಯಿರಲಿಲ್ಲ.

ಮನೆಯಂಗಳದಲ್ಲಿ ನಿಂತು ನೆನೆಯುವುದು ಮುಕ್ತವಾಗಿ ನೆನೆದಂತಲ್ಲ. ನೆನೆಯುವುದೊಂದೇ ಉದ್ದೇಶವಲ್ಲ. ಆಡಬೇಕು. ನೆನೆಯುತ್ತ ಆಡುವುದು, ಆಡಿ ನೆನೆಯುವುದು ದೊಡ್ಡ ಬಯಕೆಯಾಗಿತ್ತು. ಅದಕ್ಕೆ ಬಯಲಿಗೆ ಹೋಗಬೇಕಿತ್ತು. ಮಳೆ ಸಮಾಧಾನದಿಂದ ಸುರಿಯುತ್ತಿತ್ತು.

ಎಲ್ಲಿಗೆ ಹೋಗಿ ನೆನೆಯುವುದು, ಆಡುವುದು? ಯೋಚನೆಯಲ್ಲಿದ್ದ. ಊರಾಚೆಗಿನ ಕೆರೆಯಂಗಳ ನೆನಪಿಗೆ ಬಂದಿತು. ಮನಸ್ಸನ್ನು ಸೆಳೆಯಿತು. ಕೊಡೆ ಅರಳಿಸಿ, ತುರ್ತಿನ ಕೆಲಸವಿದ್ದಂತೆ ತೋರುವಂತೆ ಹೆಜ್ಜೆ ಹಾಕಿದ.

ಕೆರೆಯಂಗಳ ತಲುಪುವ ಹೊತ್ತಿಗೆ ಮಳೆ ನಿಂತುಬಿಟ್ಟರೆ ಎಂಬ ಪ್ರಶ್ನೆ ಸಹಿತ ಶಂಕೆ ಮೂಡಿತು. ಅದೃಷ್ಟ ಪರೀಕ್ಷೆ ನಡೆದೇ ಹೋಗಲಿ ಎಂದು ನಡಿಗೆ ಮುಂದುವರೆಸಿದ. ಮಳೆಯ ಮಂದಸ್ಮಿತ ಕುಗ್ಗಲಿಲ್ಲ. ಆರಂಭದ ಲಯದಲ್ಲೇ ಸುರಿಯುತ್ತಿತ್ತು.

ಕೆರೆಯಂಗಳದಲ್ಲಿ ನಿಂತ. ಕೊಡೆಯನ್ನು ಮೊಗ್ಗು ಮಾಡಿ ನೆಲದ ಮೇಲಿಟ್ಟ. ಚಪ್ಪಲಿಯನ್ನು ಕಳಚಿದ.